# ಕೊಕ್ಕರೆ ಬೆಳ್ಳೂರು ಸಹಬಾಳ್ವೆಯ ತವರೂರು



ಹಕ್ಕಿಗಳ ಪಾಲಿಗೆ 'ಕೊಕ್ಕರೆ ಬೆಳ್ಳೂರು' ನಿಜಕ್ಕೂ ತವರೂರು. ಬಾಣಂತನಕ್ಕೆ ತವರಿಗೆ ಬರುವ ಹೆಣ್ಣುಮಗಳಂತೆ, ಈ ಊರಿಗೆ ಪ್ರತಿ ವರ್ಷ ಡಿಸೆಂಬರ್ ಹೊತ್ತಿಗೆ ಹೆಜ್ಜಾರ್ಲೆ ಮತ್ತು ಬಣ್ಣದ ಕೊಕ್ಕರೆಗಳು ವಲಸೆ ಬರುತ್ತವೆ.

■ ಸಿದ್ದು ಆರ್.ಜಿ. ಹಳ್ಳಿ



ಕೊಕ್ಕರೆ ಬೆಳ್ಳೂರಿನಲ್ಲಿ ಬೀಡು ಬಿಟ್ಟಿರುವ ಹೆಜ್ಜಾರ್ಲೆ ಪಕ್ಷಿಗಳು (ಸ್ಪಾಟ್ ಬಿಲ್ಡ್ ಪೆಲಿಕಾನ್)



ಹೆಜ್ಜಾರ್ಲೆಯ ಸ್ವಚ್ಛಂದ ಹಾರಾಟ

ಮಾನವ– ವನ್ಯಜೀವಿ ಸಂಘರ್ಷ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ದುರಿತ ಕಾಲದಲ್ಲೂ, ವಲಸೆ ಪಕ್ಷಿಗಳೊಂದಿಗೆ ಸುಮಧುರ ಸಹಜೀವನವನ್ನು ನಡೆಸುತ್ತಿದ್ದಾರೆ ಕೊಕ್ಕರೆ ಬೆಳ್ಳೂರಿನ ಗ್ರಾಮಸ್ಥರು. ಈ ಊರಿನ ಮರಗಳಿಂದ ಕೇಳಿಬರುವ ಹಕ್ಕಿಗಳ ಚಿಲಿಪಿಲಿ 'ಸಹಬಾಳ್ವೆಯ ಗಾನ'ದಂತೆ ಭಾಸವಾಗುತ್ತದೆ.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಬೆಳ್ಳೂರಿನ ಜನರಿಗೂ 'ಬೆಳ್ಳಕ್ಕಿ'ಗಳಿಗೂ ಹಲವು ದಶಕಗಳ ನಂಟಿದೆ. ಈ ನಿಕಟ ಸಂಬಂಧದಿಂದಲೇ ಈ ಊರಿಗೆ 'ಕೊಕ್ಕರೆ ಬೆಳ್ಳೂರು' ಎಂಬ ಹೆಸರು



ಬಣ್ಣದ ಕೊಕ್ಕರೆಗಳ (ಪೇಂಟೆಡ್ ಸ್ಟಾರ್ಕ್) ಕಲರವ (ಚಿತ್ರ: ಸಂತೋಷ ಚಂದ್ರಮೂರ್ತಿ)